| | |
|---|---|
| **ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ.** | |
| **ಸಿ.ಸಿ. ನಂ.1/2021** | |
| **ಚಾಸಾ - 19** | |
| **ಪ್ರಾಸಾ - 16** | |
| ಸಾಕ್ಷಿದಾರರ ಹೆಸರು | ನಾನಾಸಾಹೇಬ ಬಸರೀಗಿಡದ |
| ತಂದೆ/ಗಂಡ/ತಾಯಿ ಹೆಸರು | ಯಮನಪ್ಪ |
| ವಯಸ್ಸು | **51 ವರ್ಷ** |
| ಉದ್ಯೋಗ | ಡೆಪ್ಯೂಟಿ ಸೆಕ್ರೆಟರಿ, ಜಿಲ್ಲಾ ಪಂಚಾಯತ ಬಾಗಲಕೋಟ |
| ವಾಸಸ್ಥಳ | ಬಾಗಲಕೋಟ. |

ಸಾಕ್ಷಿಯನ್ನು ದಿನಾಂಕಃ**-07.02.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-

ನಾನು 2015 ರಿಂದ 2019 ರವರೆಗೆ ಕಾರ್ಯ ನಿರ್ವಾಹಕ ಅಧಿಕಾರಿ ಎಂದು ತಾಲೂಕಾ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ. ಡಿಸೆಂಬರ್-2017 ರ ಮತ್ತು ಜನವರಿ-2018 ರ ಗಳಿಕೆ ರಜೆಯ ನಗದೀಕರಣ ಮತ್ತು ಸಂಬಳದ ಬಿಲ್ಲುಗಳು ಟ್ರಸರಿಯಿಂದ ಮಂಜೂರಾಗಿದ್ದನ್ನು ಕೇಳಿದ್ದರು. ಅವುಗಳನ್ನು ದಿನಾಂಕ 06.07.2018 ರಂದು ನಾನು ಪೋಲೀಸ ಠಾಣೆಗೆ ಕೊಟ್ಟಿದ್ದೇನೆ. ನಾನು ಪೋಲೀಸರಿಗೆ ಪತ್ರ ಬರೆದು ಎರಡು ಬಿಲ್ಲುಗಳನ್ನು ಕಳುಹಿಸಿದ್ದು, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-24 ಎಂದು ಸಾಕ್ಷಿಯ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು. 2 ಟೋಕನ್ ಜೊತೆಗೆ 2 ಬಿಲ್ಲುಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಟೋಕನ್ ನಂ.ಓಜಿ00094051 ಮತ್ತು ಟೋಕನ್ ನಂ. ಓಜಿ02231202 ಗಳ ಬಿಲ್ಲುಗಳನ್ನು ಕ್ರಮವಾಗಿ ನಿಪಿ-25 ಮತ್ತು ನಿಪಿ-26 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರ ಶ್ರೀ.ಡಿ.ಡಿ.ಜೆ. ವಕೀಲರಿಂದಃ-

ನಿಪಿ-25 ಮತ್ತು ನಿಪಿ-26 ನ್ನು ನಾನು ಠಾಣೆಗೆ ಹೋಗಿ ಖುದ್ದಾಗಿ ಕೊಟ್ಟಿರುವುದಿಲ್ಲ. ಟೋಕನಿನ ಮೂಲ ಪ್ರತಿಗಳು ನಮ್ಮ ಬಳಿ ಇರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಅದರ ಪ್ರತಿಯನ್ನು ಹಾಜರು ಪಡಿಸಿದ್ದೇನೆ ಎಂದು ಹೇಳುತ್ತಾರೆ. ನಿಪಿ-24 ರಲ್ಲಿ ಮೂಲ ಪ್ರತಿ ನಮ್ಮ ಬಳಿ ಇಲ್ಲ, ಅವುಗಳ ಪ್ರತಿಯನ್ನು ಹಾಜರು ಪಡಿಸುತ್ತಿದ್ದೇನೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ಮೂಲ ಕಡತದಲ್ಲಿ ಯಾವೆಲ್ಲಾ ದಾಖಲಾತಿಗಳು ಇದ್ದವು ಎಂದು ನಿಪಿ-24 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಿಪಿ-25 ಮತ್ತು ನಿಪಿ-26 ರ ಮೇಲೆ ನನ್ನ ಸಹಿ ಮತ್ತು ಮೊಹರು ಇಲ್ಲ ಎಂದರೆ ಸರಿ. ನಿಪಿ-25 ಮತ್ತು ನಿಪಿ-26 ರ ದಾಖಲಾತಿಗಳು ನಮ್ಮ ಕಚೇರಿಗೆ

ಸಂಬಂಧಪಟ್ಟ ದಾಖಲಾತಿಗಳು ಅಲ್ಲ ಅನ್ನುವುದು ಸರಿಯಲ್ಲ. ಚಾಸಾ-1 ಇವರಿಗೆ ಅನುಕೂಲವಾಗಲಿ ಎಂದು ನಿಪಿ-25 ಮತ್ತು ನಿಪಿ-26 ನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ನಮ್ಮ ಬಳಿ ಇರುವ ದಾಖಲಾತಿಗಳಿಗೆ ನಮ್ಮ ಸಹಿ ಇರುತ್ತವೆ ಎಂದರೆ ಸರಿಯಲ್ಲ. ನಿಪಿ-25 ಮತ್ತು ನಿಪಿ-26 ರ ಮೇಲೆ ನನ್ನ ಸಹಿ ಇಲ್ಲ ಎಂದರೆ ಸರಿ. ಈ ಕೇಸಿಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ನಿಪಿ-25 ಮತ್ತು ನಿಪಿ-26 ರನ್ನು ತಯಾರಿಸಿ ಕಳುಹಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

ಸಾಕ್ಷಿಯ ಸಹಿ

| ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ. | |
|---|---|
| ಸಿ.ಸಿ. ನಂ.**1/2021** | |
| ಚಾಸಾ - **21** | |
| ಪ್ರಾಸಾ - **17** | |
| ಸಾಕ್ಷಿದಾರರ ಹೆಸರು | ವಿವೇಕ್‌ಸಿಂಗ್ ಮರಕಾಮ್ |
| ತಂದೆ/ಗಂಡ/ತಾಯಿ ಹೆಸರು | ರಾಮರೂಪ್‌ಪ್ರಸಾದ |
| ವಯಸ್ಸು | **34** ವರ್ಷ |
| ಉದ್ಯೋಗ | ಬ್ಯಾಂಚ್ ಮ್ಯಾನೇಜರ್ ಎಸ್.ಬಿ.ಐ ಬೆಳಗಾವಿ |
| ವಾಸಸ್ಥಳ | ಬೆಳಗಾವಿ |

ಸಾಕ್ಷಿಯನ್ನು ದಿನಾಂಕಃ-**07.02.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-

ನಾನು 2019 ರಿಂದ 2020 ರವರೆಗೆ ಜಮಖಂಡಿಯ ಎಸ್.ಬಿ.ಐ ಶಾಖೆಯಲ್ಲಿ ಗುಮಾಸ್ತನಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ಪೋಲೀಸ ಠಾಣೆಯಿಂದ ಪತ್ರ ಬಂದ ಮೇರೆಗೆ ನಾನು 2 ಚೆಕ್‌ಗಳು ಮತ್ತು ಸಂಬಳದ ಬಗ್ಗೆ ವಿವರಣೆ ಕೊಟ್ಟಿದ್ದೇನೆ. ನಮ್ಮ ಶಾಖೆಯಲ್ಲಿ ನಗದೀಕರಣಗೊಂಡ ಆರೋಪಿಯ ಖಾತೆಗೆ ಸಂಬಂಧಪಟ್ಟಂತಹ ಸ್ಟೇಟ್‌ಮೆಂಟನ್ನು ಪೋಲೀಸರಿಗೆ ಕೊಟ್ಟಿದ್ದೇನೆ. ಸದರಿ ಪತ್ರವನ್ನು ನಿಪಿ-27 ಎಂದು ಸಾಕ್ಷಿ ಸಹಿಯನ್ನು ನಿಪಿ-27(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರ ಶ್ರೀ.ಡಿ.ಡಿ.ಜೆ. ವಕೀಲರಿಂದಃ-

ಪೋಲೀಸರು ಕೊಟ್ಟಂತಹ ನಿವೇದನೆಯನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ಸದರಿ ದಾಖಲಾತಿಯನ್ನು ಕನ್ನಡದಲ್ಲಿ ಇದ್ದು, ನಮ್ಮ ಬ್ಯಾಂಕಿನ ಮ್ಯಾನೇಜರ ಸದರಿ ದಾಖಲಾತಿಯ ಬಗ್ಗೆ ಹೇಳಿದ್ದಾರೆ. ಆ ಸಮಯದಲ್ಲಿ ವಿಷ್ಣುಕುಮಾರ ಇವರು ಬ್ಯಾಂಚ್ ಮ್ಯಾನೇಜರ ಆಗಿದ್ದರು. ಪೋಲೀಸರು ಕೊಟ್ಟಂತಹ ನಿವೇದನೆಯಲ್ಲಿ ಬ್ಯಾಂಕ್ ಖಾತೆ ನಂಬರನ್ನು ಕೊಟ್ಟಿದ್ದರು, ಅದರ ಆಧಾರದ ಮೇಲೆ ಸ್ಟೇಟ್‌ಮೆಂಟನ್ನು ಕೊಟ್ಟಿದ್ದೇನೆ. ಯಾವ ಖಾತೆಯಿಂದ ಆರೋಪಿಯ ಖಾತೆಗೆ ಹಣ ಜಮೆ ಆಗಿದೆ ಎಂದು ನಿಪಿ-27 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಈ ಕೇಸಿನ ಬಗ್ಗೆ ನನಗೆ ಏನೂ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ದಾಖಲಾತಿಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಆದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಸಾಕ್ಷಿಯ ಸಹಿ

ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.